EMBASSY
REIT

July 31, 2026

To,
The Corporate Relations Department,
The National Stock Exchange of India Limited,
Exchange Plaza, 5th Floor,
Plot No. C/1, G-Block, Bandra-Kurla Complex,
Bandra (East), Mumbai – 400051

To,
The Corporate Relations Department,
Department of Corporate Services,
BSE Limited,
25th Floor, Phiroze Jeejeebhoy Towers,
Dalal Street, Mumbai – 400001

Re: Scrip Symbol "EMBASSY", Scrip Code 542602 and Scrip Codes 973434, 973546, 973910, 975051, 976042, 976240, 976699, 976700, 976864, 976946, 977606 and 977901 (NCDs) and Scrip Codes 731343, 731468 and 731469 (CPs)

Dear Sir/ Madam,

Subject: Submission of copies of Newspaper Advertisements for Unaudited Consolidated Financial Results of Embassy Office Parks REIT for the quarter ended June 30, 2026.

Pursuant to Regulation 52(8) of the Securities and Exchange Board of India (Listing Obligations and Disclosure Requirements) Regulations, 2015, we have enclosed copies of the newspaper advertisements published in The Hindu BusinessLine and Samyuktha Karnataka on Friday, July 31, 2026, in connection with Embassy Office Parks REIT's approved Unaudited Consolidated Financial Results for the quarter ended June 30, 2026.

Thanking you,

For and on behalf of **Embassy Office Parks REIT** acting through its Manager, **Embassy Office Parks Management Services Private Limited**

Vinitha Menon
Head - Company Secretary and Compliance Officer
A25036

Encl: As above

FTA monitoring panel to review utilisation of 16 pacts in August

TRADE ASSESSMENT. Committee will discuss the impediments faced by industry

Amiti Sen
New Delhi

The Commerce Department's FTA monitoring committee is scheduled to meet in August to undertake a comprehensive review of the implementation of the country's 16 operational trade agreements, including the recently implemented pacts with the UK and Oman, and identify the challenges faced by exporters in using the concessions they offer.

"The government is seeking detailed feedback from industry on the impediments in utilising the different FTAs. Sector-wise inputs are being collected so that the issues can be addressed," a source told *businessline*.

Of the 16 trade pacts implemented so far by the country, 10 were implemented before the BJP government came to power in 2014.

TAKING STOCK. The FTA monitoring committee's review assumes significance as India pursues a strategy of signing comprehensive trade agreements with advanced economies

These include the India-Sri Lanka FTA, the Agreement on Safta, the India Nepal Treaty of Trade, the India-Bhutan Agreement on Trade Commerce and Transit, the India-Thailand FTA - Early Harvest Scheme, the India-Singapore CECA, the India-Asean CECA, the India-Malaysia CECA, the India-South Korea CEPA, and the India-Japan CEPA.

The ones signed by the present government are the India-Mauritius CECPA, the India-UAE CEPA, the India-Oman CEPA, the India-Australia ECTA, the India–EFTA (Switzerland, Iceland, Liechtenstein, Norway) TEPA and the India–UK CETA.

FTA UTILISATION

A range of factors was flagged by industry that limit FTA utilisation. "The problems include the complex and stringent rules of origin that determine eligibility for preferential tariffs, especially the product specific rules, the cumbersome documentation and certification requirements, limited awareness among exporters, particularly MSMEs, and increasingly demanding technical regulations, sanitary and phytosanitary measures and quality standards in partner countries," an industry source said.

India's overall FTA utilisation has been historically very low. "Only an estimated 20–30 per cent of India's eligible exports take advantage of FTA preferences. Many small firms prefer to avoid the compliance burden for modest tariff savings," according to a 2026 report on FTA challenges by GTRI.

The FTA monitoring committee's review assumes significance as India pursues an ambitious strategy of signing comprehensive trade pacts with advanced economies.

'India-EU free trade pact has work plan built in to address CBAM concerns'

Amiti Sen
New Delhi

A comprehensive work plan built into the India-European Union free trade agreement (FTA) could help address concerns of Indian exporters, particularly small and medium enterprises (SMEs), over complying with the bloc's Carbon Border Adjustment Mechanism (CBAM), a senior Commerce Department official said.

"CBAM compliances are a concern among SMEs in terms of verification, in terms of finding out what is the value of embedded carbon, in terms of ensuring that the verifiers are recognised by the EU authorities. So there is a comprehensive work plan under the annexure on CBAM, and we are working on it. I am very hopeful that SMEs will not face any problem," Commerce Department Additional Secretary Darpan Jain said at the Indo-German Chamber of Commerce industry dialogue 2026 on Thursday. The EU's CBAM, which is being phased in, will require exporters of identified carbon-intensive products, including steel, aluminium and cement, to pay for the embedded carbon emissions in the form of a levy, which would kick in from January 2027.


The pact provides for cooperation on verification of embedded carbon emissions and recognition of verifiers

Indian exporters, especially those in the MSME sector, have expressed concern over the compliance burden and the additional costs associated with the mechanism. Jain said CBAM consumed a significant part of the negotiations, with India pushing for provisions that would mitigate the impact of the EU's new carbon levy on domestic exporters.

MULTIPLE PILLARS

The pact contains a dedicated annexure on CBAM with multiple pillars, he said. One of the provisions requires that if the EU grants any future flexibility under the CBAM regime, the same would be extended to India.

The pact also provides for cooperation on compliance-related issues, including verification of embedded carbon emissions, recognition of verifiers by EU authorities and capacity building for exporters, particularly SMEs, that may lack the technical expertise to comply with the new reporting requirements.

Another important element of the annexure relates to India's evolving domestic carbon pricing framework. "And we also have a provision in which we can engage with EU authorities on taking into account the carbon price which is paid in India. As you would know, India also is developing its own carbon pricing mechanism. So, how to offset what is paid in India from what is paid in Europe?" he said.

FTA IMPLEMENTATION

On the implementation of the India-EU FTA, Jain said the Commerce Ministry had begun preparations to ensure that businesses across the country are able to fully utilise the agreement once it comes into force.

The Ministry has planned an extensive outreach programme covering more than 700 districts, working with State governments to educate businesses on the opportunities available under the FTA. It is also developing digital tools to help companies, particularly small businesses, understand the agreement and access its benefits more easily, he said.

Govt empanels 16 third-party testing agencies for Coal Exchange

Rishi Ranjan Kala
New Delhi

The Coal Ministry has empanelled 16 entities as third-party agencies (TPAs) for the collection, preparation, analysis and documentation of coal and lignite samples that will be traded through the Coal Exchange.

In November last, the Ministry floated a request for qualification (RFQ) inviting online applications from eligible agencies.

Coal Exchange is an online platform, where buyers and sellers of coal and its processed forms, transact, trade and enter into contracts.

"The empanelment process has been completed. In response to the RFQ, 16 agencies have been found technically qualified and are hereby empanelled as TPAs for collection, preparation, analysis and documentation of samples of coal and lignite or its processed form that will be transacted through the exchange," the Ministry said.

TIMELINE

The estimated timeline for operationalisation of the regulated coal exchange is 12 months from the date of receipt of an application, for its registration, on the dedicated online application platform opened on July 15.

The empanelled TPAs will perform the assigned activities in accordance with the rules, regulations, guidelines and directions issued by the Coal Controller Organisation (CCO), in its capacity as the regulator of the Coal Exchange.

These norms will also be in accordance with the contract executed between the concerned market participants and the TPA under the framework of the Coal Exchange in accordance with the Coal Exchange Rules, 2026, it added.

CRUCIAL ROLE
TPAs will collect, test and certify coal samples as the Centre prepares to operationalise the regulated Coal Exchange within 12 months

The TPAs will collect coal samples at the designated sampling points and then prepare laboratory samples from the collected raw samples. These will then be tested and analysed in NABL-accredited laboratories. The agency will prepare test reports and all associated documentation relating to the sampling and testing process.

"Any other activity as may be provided in the contract executed between the concerned market participant(s) and the TPA in the Coal Exchange, in accordance with the guidelines issued by the Coal Controller Organisation (CCO) from time to time," the Ministry said, detailing the responsibilities of the empanelled TPAs.

CCO NORMS

The TPAs will perform the assigned activities in accordance with the rules, regulations, guidelines and directions issued by the CCO, in its capacity as the regulator for the Coal Exchange, from time to time.

"The empanelment shall further be subject to the condition that the empanelled TPAs shall establish and maintain laboratories equipped with a Laboratory Information Management System (LIMS), a tracking system for providing real-time status updates of samples, and mechanized sampling systems, wherever required by the user agency. They shall upload coal sample results on the designated web portal, in accordance with the terms and conditions of the contract executed under the Coal Exchange and with the approval of the Coal Controller," it said.

The period of empanelment shall be five years from the date of operationalisation of the first Coal Exchange in India under the Coal Exchange Rules, 2026.

'Petrol would have cost ₹125/litre during March-April without ethanol blending'

Rishi Ranjan Kala
New Delhi

Emphasising that ethanol blending helped save almost 32 million tonnes of crude oil, Road & Highways Minister Nitin Gadkari told Parliament on Thursday that petrol would have cost ₹125 per litre during the peak of the West Asia conflict had ethanol blending not been carried out.

The government has been reiterating that the objective behind the ethanol-blended petrol (EBP) programme is to reduce India's almost 88 per cent import dependence on crude oil.

Responding to a starred question in the Lok Sabha, Gadkari said: "During the recent West Asian crisis, despite sharp increases in global crude prices, India was able to shield consumers through calibrated government interventions, diversified sourcing and the increasing contribution of domestically produced biofuels."


Nitin Gadkari, Minister for Road Transport & Highways

Since February 2026, even though global crude prices rose by around 70–80 per cent, domestic fuel prices increased only by about 7–8 per cent, he emphasised.

"During the peak of West Asia crisis, the market price of petrol could have been around ₹125 per litre, however Indian consumers continued to pay only ₹94.77 per litre (ex-Delhi) also because OMCs could procure ethanol at around ₹70 per litre," he noted.

By replacing a part of imported petrol with domestically produced ethanol, India reduced its exposure to international crude oil price volatility and exchange-rate fluctuations, he pointed out.

"This demonstrates that ethanol blending is a strategic investment in energy security, price stability, farmer welfare and foreign exchange savings, rather than a revenue-generating exercise for the oil marketing companies," Gadkari stressed.

E20 PETROL PRICE

The retail selling price of E20 petrol is market-determined, and public sector OMCs determine petrol prices after considering international crude oil prices, exchange rates, freight, taxes, ethanol procurement costs and other operational expenses.

For instance, he said during February-March 2026, the retail selling price of petrol remained below the market determined level, resulting in an under-recovery of around ₹21,300 crore for public sector OMCs on account of petrol.

"The EBP has resulted in forex savings of ₹1.98 lakh crore, substitution of nearly 317 lakh tonnes of crude oil, reduction of around 952 lakh tonnes of CO_2 emissions and additional income of over ₹1.66 lakh crore for farmers," Gadkari noted.

Meanwhile, Minister of State for Petroleum & Natural Gas Suresh Gopi emphasised that the government's assessment is based not only on laboratory research but also on large-scale experience after nationwide implementation. Roughly 8 crore vehicles visit fuel retail outlets every day (of this around 80 per cent are petrol vehicles).

ಸೈಬರ್ ಭದ್ರತೆ ಸಂಶೋಧನೆ: ನಿಟ್ಟೆ ವಿವಿಯ ಹಳೆಯ ವಿದ್ಯಾರ್ಥಿ ಸಾಧನೆ

ಸಂ.ಕ.ಸಮಾಚಾರ, ಬೆಂಗಳೂರು

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ಸುಮಂತ್ ಕಾಮತ್ ಅವರ ಸೈಬರ್ ಭದ್ರತಾ ಸಂಶೋಧನೆಯು ಅಮೆರಿಕದ ಬಾಸ್ಟನ್ ವಿಶ್ವವಿದ್ಯಾಲಯದಿಂದ ವಿಶೇಷ ಮನ್ನಣೆ ಪಡೆದಿದೆ.

ಅಮೆರಿಕದ ಬಾಸ್ಟನ್ ವಿವಿಯಿಂದ ವಿಶೇಷ ಮನ್ನಣೆ

ನಿಟ್ಟೆ ವಿವಿ ಇದಕ್ಕೆ ಹೆಮ್ಮೆ ವ್ಯಕ್ತಪಡಿಸಿದ್ದು, ಸುಮಂತ್ ಅವರು ಬಾಸ್ಟನ್‌ನ ಸಾರ್ವಜನಿಕ ಸಾರಿಗೆ ಪಾವತಿ ವ್ಯವಸ್ಥೆಯಲ್ಲಿನ ನಿರ್ಣಾಯಕ ಲೋಪವೊಂದನ್ನು ಯಶಸ್ವಿಯಾಗಿ ಬಹಿರಂಗಪಡಿಸಿದ್ದಾರೆ.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 2020–24ರ ಸಾಲಿನಲ್ಲಿ ಇನ್ಫರ್ಮೇಷನ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದಲ್ಲಿ ಪದವಿ ಪಡೆದಿರುವ ಸುಮಂತ್ ಕಾಮತ್, ಪ್ರಸ್ತುತ ಬಾಸ್ಟನ್ ವಿಶ್ವವಿದ್ಯಾಲಯದಲ್ಲಿ ಡಾಟಾ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ. ಬಾಸ್ಟನ್ ವಿಶ್ವವಿದ್ಯಾಲಯದ ತಮ್ಮ ಸಹ-ಸಂಶೋಧಕ ದಾಮೋದರ್ ಪೈ ಅವರೊಂದಿಗೆ ಸೇರಿ, ಇವರು ಮ್ಯಾಸಚೂಸೆಟ್ಸ್ ಬೇ ಟ್ರಾನ್ಸ್‌ಪೋರ್ಟೇಷನ್ ಅಥಾರಿಟಿಯ 'ಟ್ಯಾಪ್–ಟು–ಪೇ' ದರ ಸಂಗ್ರಹಣಾ ವ್ಯವಸ್ಥೆಯಲ್ಲಿ ವಿನ್ಯಾಸದ ಕೊರತೆಯನ್ನು ಗುರುತಿಸಿ, ಪಾವತಿ ದೃಢೀಕರಣವು ವಿಫಲಗೊಂಡ ಹೊರತಾಗಿಯೂ ಪ್ರಯಾಣಿಕರು ಸಾರಿಗೆ ಸೇವೆಯನ್ನು ಪಡೆಯಲು ಇದು ಅವಕಾಶ ಮಾಡಿಕೊಡುತ್ತಿತ್ತು ಎಂಬುದನ್ನು ಪತ್ತೆಹಚ್ಚಿದ್ದಾರೆ. ಸಾರ್ವಜನಿಕ ಮೂಲ ಸೌಕರ್ಯಗಳನ್ನು ಬಲಪಡಿಸಲು ಮತ್ತು ಡಿಜಿಟಲ್ ಭದ್ರತೆಯನ್ನು ಸುಧಾರಿಸಲು ಕೊಡುಗೆ ನೀಡುವ ಸಂಶೋಧನೆಗೆ ಉತ್ತಮ ಉದಾಹರಣೆಯೆಂದು ಬಾಸ್ಟನ್ ವಿಶ್ವವಿದ್ಯಾಲಯವು ಇವರ ಕೆಲಸವನ್ನು ಗುರುತಿಸಿದೆ.

> ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳು ಟಿಕೆಟ್ ಆದಾಯವನ್ನು ಅವಲಂಬಿಸಿವೆ. ಈ 'ಟ್ಯಾಪ್–ಟು–ಪೇ' ವ್ಯವಸ್ಥೆಯಲ್ಲಿ ಕಾಣಿಸಿಕೊಂಡ ದುರ್ಬಲತೆಯನ್ನು ನಮ್ಮ ಸಂಶೋಧನೆಗೆಂದು ಮ್ಯಾಸಚೂಸೆಟ್ಸ್ ಬೇ ಟ್ರಾನ್ಸ್‌ಪೋರ್ಟೇಷನ್ ಅಥಾರಿಟಿಗೆ ಜವಾಬ್ದಾರಿಯುತವಾಗಿ ಬಹಿರಂಗಪಡಿಸುವ ಮೂಲಕ ನೈತಿಕ ಸೈಬರ್ ಸುರಕ್ಷತೆಯ ತತ್ವಗಳನ್ನು ಅನುಸರಿಸಿದ್ದೇವೆ.
> ▪ಸುಮಂತ್, ವಿದ್ಯಾರ್ಥಿ

ನಾಳೆಯಿಂದ ಆಪರೇಷನ್ ಜೆಸಿಬಿ: ಕೆಬಿಜಿ

1,616 ಸ್ಥಳಗಳಲ್ಲಿ 22 ಸಾವಿರ ಟನ್ ತ್ಯಾಜ್ಯ ತೆರವಿಗೆ | 'ತ್ಯಾಜ್ಯದಿಂದ ಸ್ವಾತಂತ್ರ್ಯ' ಅಭಿಯಾನ

ಸಂ.ಕ.ಸಮಾಚಾರ, ಬೆಂಗಳೂರು

ರಾಜಧಾನಿಯಲ್ಲಿ ಆಪರೇಷನ್ ಫುಟ್‌ಪಾತ್ ಒತ್ತುವರಿ ತೆರವು ಬಳಿಕ, ಜಸ್ಟ್ ಕ್ಲೀನ್ ಬೆಂಗಳೂರಿಗೆ(ಜೆಸಿಬಿ) ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಕರೆ ಕೊಟ್ಟಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಬೆಂಗಳೂರಿನಾದ್ಯಂತ ಆ.1ರಿಂದ ಹಮ್ಮಿಕೊಳ್ಳಲಾಗುತ್ತಿರುವ 'ತ್ಯಾಜ್ಯದಿಂದ ಸ್ವಾತಂತ್ರ್ಯ' ಅಭಿಯಾನದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು ಮಾತ್ರ ತೆರವುಗೊಳಿಸಲಾಗುತ್ತದೆ. ಗ್ರತ ತ್ಯಾಜ್ಯದಿಂದ ಉಂಟಾಗುತ್ತಿರುವ ಬ್ಲಾಕ್ ಸ್ಪಾಟ್‌ಗಳನ್ನು ಮುಂದಿನ ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಡೆಬ್ರಿಸ್‌ಗಳನ್ನು ವಿಲೇವಾರಿ ಮಾಡಲು ಹೊಸ ಕ್ರಮ ಜಾರಿಗೆ ಮುಂದಾಗಿದ್ದು, ಕಸ ವಿಲೇವಾರಿ ಮಾಡುವ ವಾಹನಗಳಲ್ಲಿ ಜಿಪಿಎಸ್ ಕಡ್ಡಾಯಗೊಳಿಸಲಾಗಿದೆ.

ಮುಂದಿನ ಆಗಸ್ಟ್ ತಿಂಗಳು ಪೂರ್ತಿ ತ್ಯಾಜ್ಯ ಮುಕ್ತಕ್ಕೆ ಸರ್ಕಾರ ಮುಂದಾಗಿದ್ದು, ಗುರುತು ಮಾಡಿರುವ ಜಾಗದಲ್ಲಿ ಮಾತ್ರ ಕಸ ಹಾಕಬೇಕು ಎಂದು ತಿಳಿಸಿದರು.

ನಗರದ ರಸ್ತೆಬದಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಮತ್ತು ವಿವಿಧ ಸಾಮಗ್ರಿಗಳನ್ನು ಸುರಿಯುತ್ತಿರುವುದರಿಂದ ಅವುಗಳ ಮೇಲೆ ಗಿಡಗಂಟಿಗಳು ಬೆಳೆದು, ಇಲಿ, ಹಾವು ಹಾಗೂ ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗುತ್ತಿವೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದರ ಜೊತೆಗೆ, ನಡೆಯಲು ಬಿದ್ದಿರುವ ಸ್ಥಳಗಳಲ್ಲಿ ಮತ್ತಷ್ಟು ಕಸವನ್ನು ಎಸೆಯುವ ಪ್ರವೃತ್ತಿ ಹೆಚ್ಚಾಗಿ ನಗರದ ಸೌಂದರ್ಯಕ್ಕೂ ಧಕ್ಕೆ ಉಂಟಾಗುತ್ತಿದೆ ಎಂದು ಹೇಳಿದರು.

ರಸ್ತೆಬದಿ, ಪಾದಚಾರಿ ಮಾರ್ಗ, ಸಾರ್ವಜನಿಕ ಸ್ಥಳಗಳು, ಖಾಲಿ ನಿವೇಶನಗಳು ಮಾತ್ರವಲ್ಲದೆ ವಿವಿಧ ಇಲಾಖೆಗಳ ಖಾಲಿ ಜಾಗಗಳಲ್ಲಿಯೂ ಪಾರಂಪರಿಕ ತ್ಯಾಜ್ಯ ಸಂಗ್ರಹವಾಗಿದ್ದು, ಇದರಿಂದ ಸಂಚಾರಕ್ಕೂ ಅಡಚಣೆ ಉಂಟಾಗಿದೆ.

ಪ್ರಸ್ತುತ 1,616 ಸ್ಥಳಗಳಲ್ಲಿ ಸುಮಾರು 22,000 ಟನ್ ಪಾರಂಪರಿಕ ತ್ಯಾಜ್ಯವನ್ನು ಗುರುತಿಸಲಾಗಿದೆ. ನಗರದಾದ್ಯಂತ ಒಟ್ಟು 1 ಲಕ್ಷ ಟನ್‌ಗಿಂತ ಹೆಚ್ಚು ತ್ಯಾಜ್ಯ ಇರಬಹುದೆಂದು ಅಂದಾಜಿಸಲಾಗಿದೆ. ಈ ಸಂಬಂಧ ಜಿಬಿಎ, ಐದು ನಗರ ಪಾಲಿಕೆಗಳು, ರೈಲ್ವೆ, ಬಿಡಿಎ, ಜಲಮಂಡಳಿ, ಬೆಸ್ಕಾಂ, ಕೆ–ರೈಡ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಪಾರಂಪರಿಕ ತ್ಯಾಜ್ಯ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ ಎಂದರು.

ಖಾಲಿ ನಿವೇಶನಗಳ ಮಾಲೀಕರು ಆ.15ರೊಳಗೆ ತಮ್ಮ ನಿವೇಶನಗಳನ್ನು ಸ್ವಯಂ ಸ್ವಚ್ಛಗೊಳಿಸಬೇಕೆಂದು ಮನವಿ ಮಾಡಿದರು. ಆ.15ರ ನಂತರವೂ ಸ್ವಚ್ಛಗೊಳಿಸದ ನಿವೇಶನಗಳನ್ನು ಸಂಬಂಧಿಸಿದ ನಗರ ಪಾಲಿಕೆ ಸ್ವಚ್ಛಗೊಳಿಸಿ, ಅದಕ್ಕೆ ತಗಲುವ ವೆಚ್ಚವನ್ನು ಆಸ್ತಿ ತೆರಿಗೆಯೊಂದಿಗೆ ವಸೂಲಿ ಮಾಡಲಾಗುವುದು. ಇದಕ್ಕೆ ಸಂಬಂಧಿಸಿದ ವೆಚ್ಚದ ವಿವರಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಅಭಿಯಾನಕ್ಕೆ ಸಿಎಂ ಚಾಲನೆ

> ಆ.1ರಿಂದ ಆರಂಭ ವಾಗಲಿರುವ 'ತ್ಯಾಜ್ಯದಿಂದ ಸ್ವಾತಂತ್ರ್ಯ' ಅಭಿಯಾನಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ. ಆಗಸ್ಟ್ ತಿಂಗಳ ಪೂರ್ತಿ ಅಭಿಯಾನ ನಡೆಯ ಲಿದ್ದು, ಸಾರ್ವಜನಿಕ ಸ್ಥಳಗಳಲ್ಲಿರುವ ಬೃಹತ್ ತ್ಯಾಜ್ಯವನ್ನು ಸಂಬಂಧಿಸಿದ ಇಲಾಖೆಗಳು ಹಾಗೂ ಸಂಸ್ಥೆಗಳು ತೆರವುಗೊಳಿಸುವಂತೆ ನಿರ್ದೇಶನ ನೀಡಲಾಗಿದೆ.
> ▪ಕೃಷ್ಣಬೈರೇಗೌಡ, ಸಚಿವ

ನಕಲಿ ದಾಖಲೆ: ಕಾರು ಬಿಡುಗಡೆಗೆ ಸೂಚಿಸಿದ್ದ ಕೋರ್ಟ್ ಆದೇಶ ರದ್ದು

ಸಂ.ಕ.ಸಮಾಚಾರ, ಬೆಂಗಳೂರು

ನಕಲಿ ದಾಖಲೆಗಳನ್ನು ಸೃಷ್ಟಿಸಿ, ಕಾರಿನ ಮಾಡೆಲ್ ಹೆಸರು ಬದಲಾಯಿಸಿ ನೋಂದಣಿ ಮಾಡುವ ಮೂಲಕ ಸರ್ಕಾರಕ್ಕೆ ತೆರಿಗೆ ವಂಚಿಸಿದ ಆರೋಪದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಐಷಾರಾಮಿ ಬೆಂಜ್ ಕಾರನ್ನು ವಶಕ್ಕೆ ಪಡೆದುಕೊಂಡಿದ್ದ ಸಾರಿಗೆ ಇಲಾಖೆ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ. ಅಲ್ಲದೇ ತಕ್ಷಣವೇ ಕಾರು ಬಿಡುಗಡೆ ಮಾಡಬೇಕು ಎಂದು ಸರ್ಕಾರಕ್ಕೆ ಆದೇಶಿಸಿದ್ದ ವಿಶೇಷನ್ಯ ಪೀಠದ ಆದೇಶವನ್ನು ರದ್ದುಪಡಿಸಿದೆ. ಮಂಗಳೂರು ನಿವಾಸಿ ನೀರಜ್ ಕುಮಾರ್ ಶರ್ಮಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ, ಕಾರು ಬಿಡುಗಡೆಗೆ ಆದೇಶಿಸಿದ್ದ ಏಕಸದಸ್ಯ ಪೀಠದ ಕ್ರಮ ಪ್ರಶ್ನಿಸಿ ರಾಜ್ಯ ಸರ್ಕಾರ (ಸಾರಿಗೆ ಇಲಾಖೆ) ಮೇಲ್ಮನವಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ವಿಭು ಬಖ್ರು, ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠ, ಏಕಸದಸ್ಯ ಪೀಠದ ಆದೇಶ ರದ್ದುಪಡಿಸಿದ್ದು, ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿದೆ. ಅಲ್ಲದೇ, ಕಾರಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿದ್ದ ಸಾರಿಗೆ ಇಲಾಖೆಯ ಅಧಿಕಾರಿಗಳು, ಎಲ್ಲ ದಾಖಲೆಗಳು ನಕಲಿ ಎಂಬುದಾಗಿ ಸಾಬೀತಾಗಿದ್ದು, ಕಾರಿನ ನೋಂದಣಿಯನ್ನು ಏಕೆ ರದ್ದುಪಡಿಸಬಾರದು ಎಂದು ಮಾಲೀಕರಿಗೆ ರಿಜಿಸ್ಟರ್ ಪೋಸ್ಟ್ ಮೂಲಕ ಶೋಕಾಸ್ ನೋಟಿಸ್ ಜಾರಿ ಮಾಡಿದ್ದರು. ಆದರೆ, ಕಾರು ನೋಂದಣಿಗೆ ನೀಡಿದ್ದ ವಿಳಾಸದಲ್ಲಿ ಅದರ ಮಾಲೀಕರು (ಪ್ರತಿವಾದಿಗಳು) ಇಲ್ಲದ ಕಾರಣ ಅದು ತಲುಪಿಲ್ಲ. ಅಲ್ಲದೇ, ಉದ್ದೇಶಿತ ಕಾರಿನ ಮಾರಾಟಕ್ಕೆ ಸಂಬಂಧಿಸಿದ ಪ್ರಮಾಣಪತ್ರ ಮತ್ತು ತೆರಿಗೆ ಪಾವತಿಸಿರುವ ದಾಖಲೆಗಳನ್ನು ನೀಡಿರುವುದಿಲ್ಲ ಎಂಬುದಾಗಿ ಮರ್ಸಿಡಿಸ್ ಬೆಂಜ್ ಪ್ರೈವೇಟ್ ಲಿಮಿಟೆಡ್ ಸ್ಪಷ್ಟಪಡಿಸಿದೆ.

ಸ್ವಿಗ್ಗಿ ವಿರುದ್ಧ ಹೋಟೆಲ್ ಮಾಲೀಕರ ಆಕ್ರೋಶ

ಬೇಡಿಕೆ ಈಡೇರಿಸದಿದ್ದರೆ ಆ.15ರಿಂದ ಸ್ವಿಗ್ಗಿ ಸೇವೆ ಸ್ಥಗಿತ: ಹೋಟೆಲ್ ಮಾಲೀಕರ ಸಂಘ

ಸಂ.ಕ.ಸಮಾಚಾರ, ಬೆಂಗಳೂರು

ಪ್ರಮುಖ ಆನ್‌ಲೈನ್ ಆಹಾರ ವಿತರಣಾ ಸಂಸ್ಥೆ ಸ್ವಿಗ್ಗಿ ವಿರುದ್ಧ ಬೆಂಗಳೂರಿನ ಹೋಟೆಲ್ ಮಾಲೀಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಆ.15ರ ನಂತರ ಸ್ವಿಗ್ಗಿ ಸೇವೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಹೋಟೆಲ್ ಮಾಲೀಕರ ಮಹತ್ವದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ನ್ಯಾಯಯುತ ಹಾಗೂ ಪಾರದರ್ಶಕ ಪಾಲುದಾರಿಕೆಗಾಗಿ ಸ್ವಿಗ್ಗಿ ಆಡಳಿತ ಮಂಡಳಿಯನ್ನು ಒತ್ತಾಯಿಸಲಾಗಿದೆ.

ಆನ್‌ಲೈನ್ ಫುಡ್ ಡೆಲಿವರಿ ಸಂಸ್ಥೆಯಿಂದ ವಿಧಿಸಲಾಗುತ್ತಿರುವ ದುಬಾರಿ ಕಮಿಷನ್, ಕಡ್ಡಾಯ ಡಿಸ್ಕೌಂಟ್ ಹಾಗೂ ವಿವಿಧ ಹಿಡಿತಗಳಿಂದಾಗಿ ಹೋಟೆಲ್ ಉದ್ಯಮಕ್ಕೆ ಭಾರಿ ಆರ್ಥಿಕ ಪೆಟ್ಟು ಬೀಳುತ್ತಿದೆ. ಹೋಟೆಲ್ ಮಾಲೀಕರ ಲಾಭಾಂಶ ತೀವ್ರವಾಗಿ ಕುಸಿಯುತ್ತಿದ್ದು, ಸ್ವಿಗ್ಗಿಯ ಏಕಪಕ್ಷೀಯ ಒಪ್ಪಂದದ ನಿಯಮಗಳಿಂದಾಗಿ ತಾವು ಶೋಷಣೆಗೆ ಒಳಗಾಗುತ್ತಿದ್ದೇವೆ ಎಂದು ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆನ್‌ಲೈನ್ ಮೂಲಕ ಆಹಾರ ಪೂರೈಕೆ ಮಾಡುವ ಸ್ವಿಗ್ಗಿ ಸಂಸ್ಥೆ ಹೋಟೆಲ್‌ಗಳಿಂದ ಖರೀದಿ ಮಾಡುವ ದರಕ್ಕೂ ಗ್ರಾಹಕರಿಗೆ ವಿತರಣೆ ಮಾಡುವ ದರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇಂತಹ ವ್ಯತ್ಯಾಸದಿಂದ ಆ ಸಂಸ್ಥೆಗೆ ಲಾಭವಾಗುತ್ತಿದ್ದು ಹೋಟೆಲ್ ಮಾಲೀಕರಿಗೆ ನಷ್ಟವಾಗುತ್ತಿದೆ. ಇದರಿಂದ ನಷ್ಟ ಅನುಭವಿಸಬೇಕಿದ್ದು ಆ ಸಂಸ್ಥೆ ಜೊತೆ ವ್ಯವಹಾರ ಸ್ಥಗಿತ ಮಾಡುವುದು ಸೂಕ್ತ ಎಂದು ಹೋಟೆಲ್ ಮಾಲೀಕರು ನಿರ್ಧರಿಸಿದ್ದಾರೆನ್ನಲಾಗಿದೆ.

ಸಭೆಯ ಕೈಗೊಂಡ ನಿರ್ಧಾರ ಏನು?

- ಹೋಟೆಲ್ ಮಾಲೀಕರ ಒಪ್ಪಿಗೆಯಿಲ್ಲದೆ ಆ್ಯಪ್‌ನಲ್ಲಿ ಗ್ರಾಹಕರಿಗೆ ಯಾವುದೇ ರೀತಿಯ ರಿಯಾಯಿತಿ ನೀಡಬಾರದು. ಜಾಹೀರಾತು ಶುಲ್ಕ ಹಾಗೂ ಪೇಮೆಂಟ್ ಗೇಟ್‌ವೇ ಶುಲ್ಕಗಳಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು.
- ಗ್ರಾಹಕರು ದೂರು ನೀಡಿದ ತಕ್ಷಣ ಹೋಟೆಲ್ ಖಾತೆಯಿಂದ ಹಣ ಕಡಿತಗೊಳಿಸಬಾರದು. ಹಾಗೆಯೇ, ಆಹಾರ ಸಿದ್ಧವಾದ ಬಳಿಕ ಆರ್ಡರ್ ರದ್ದಾದರೆ, ಆ ನಷ್ಟದ ಹೊರೆಯನ್ನು ರೆಸ್ಟೋರೆಂಟ್ ಮೇಲೆ ಹಾಕಬಾರದು.
- ಪ್ರತಿಯೊಂದು ಕಡಿತಗಳ ಬಗ್ಗೆಯೂ ಸ್ಪಷ್ಟವಾದ ಸೆಟ್ಲ್‌ಮೆಂಟ್ ವರದಿ ನೀಡಬೇಕು. ಸಮಸ್ಯೆಗಳ ತ್ವರಿತ ಪರಿಹಾರಕ್ಕಾಗಿ ಪ್ರತಿ ರೆಸ್ಟೋರೆಂಟ್‌ಗೆ ಪ್ರತ್ಯೇಕ ಸಂಪರ್ಕಾಧಿಕಾರಿಯನ್ನು ನೇಮಿಸಬೇಕು.

ನಾಳೆ ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಬೆಂಗಳೂರು: ಮೈಸೂರು ಮಲ್ಲಿಗೆ ಕವಿ ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ವತಿಯಿಂದ ನೀಡಲಾಗುವ ಪ್ರತಿಷ್ಠಿತ ಕೆ.ಎಸ್. ನರಸಿಂಹಸ್ವಾಮಿ ಸಾಹಿತ್ಯ ಪ್ರಶಸ್ತಿ ಹಾಗೂ ಕೆ.ಎಸ್.ಕಾವ್ಯಗಾಯನ ಪ್ರಶಸ್ತಿ ಪ್ರದಾನ ಸಮಾರಂಭವು ಆ. 1ರಂದು ಸಂಜೆ 5ಕ್ಕೆ ಬಸವನಗುಡಿಯ ನ್ಯಾಷನಲ್ ಕಾಲೇಜಿನ ಮಲ್ಟಿಮೀಡಿಯಾ ಹಾಲ್‌ನಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಮಾಜಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಸಚಿವ ರಾಮಲಿಂಗಾರೆಡ್ಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಟ್ರಸ್ಟ್ ಅಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ನಿರ್ದೇಶಕ ಟಿ.ಎನ್. ಸೀತಾರಾಂ ಉಪಸ್ಥಿತರಿರಲಿದ್ದಾರೆ. ಕೆ.ಎಸ್.ನರಸಿಂಹಸ್ವಾಮಿ ಅವರ ನೂರು ಕವನಗಳ ಇಂಗ್ಲಿಷ್ ಅನುವಾದದ ಪುಸ್ತಕ ಬಿಡುಗಡೆಯಾಗಲಿದೆ.

ವಿಜ್ಞಾನದ ಆಸಕ್ತಿಗೆ ಆರ್ಯಭಟ ಉಪಗ್ರಹ ಯುವಕರಿಗೆ ಸ್ಫೂರ್ತಿ

ಸಂ.ಕ. ಸಮಾಚಾರ, ಬೆಂಗಳೂರು

ಆರ್ಯಭಟ ಉಪಗ್ರಹದ ಸ್ಫೂರ್ತಿದಾಯಕ ಪರಂಪರೆ ಪ್ರದರ್ಶನವು ಪ್ರಸ್ತುತ ಪೀಳಿಗೆಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಗಮನದಿಂದ ವಿಜ್ಞಾನ ಶಿಕ್ಷಣವನ್ನು ಕೈಗೆತ್ತಿಕೊಳ್ಳಲು ಪ್ರೇರೇಪಿಸುತ್ತದೆ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಯು.ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ಎಂ. ಶಂಕರನ್ ತಿಳಿಸಿದರು. ನೆಹರು ತಾರಾಲಯದಲ್ಲಿ ನಡೆದ ಆರ್ಯಭಟ ಉಪಗ್ರಹದ ಸ್ಫೂರ್ತಿದಾಯಕ ಪರಂಪರೆ ಎಂಬ ಕಿರು ಆಕಾಶ ಪ್ರದರ್ಶನ ಬಿಡುಗಡೆ ಮಾಡಿ ಮಾತನಾಡಿದ ಅವರು, ಆರ್ಯಭಟ ಉಪಗ್ರಹ ನಿರ್ಮಿಸಿದ ವಿಜ್ಞಾನಿಗಳ ಪೀಳಿಗೆಗೆ ಹೋಲಿಸಿದರೆ, ಪ್ರಸ್ತುತ ಪೀಳಿಗೆಯು ಹೆಚ್ಚು ಜ್ಞಾನವುಳ್ಳದಾಗಿದ್ದು, ಸಮರ್ಥವೂ ಆಗಿದೆ.

ಕೆಪಿಎಸ್‌ಸಿ ಅಕ್ರಮದ ವಿರುದ್ಧ ಸಿಡಿದೆದ್ದ ಎಬಿವಿಪಿ

ಉದ್ಯೋಗಸೌಧಕ್ಕೆ ಮುತ್ತಿಗೆಗೆ ಯತ್ನ | ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು

ಸಂ.ಕ.ಸಮಾಚಾರ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) 400 ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿರುವ ಅಕ್ರಮವನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಈ ವೇಳೆ ಪ್ರತಿಭಟನಾಕಾರರು ಕೆಪಿಎಸ್‌ಸಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಎಬಿವಿಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಪಶುವೈದ್ಯಾಧಿಕಾರಿ ಮತ್ತು ಪಿಡಿಒ ನೇಮಕಾತಿ ಹಗರಣಗಳು ರಾಜ್ಯಮಟ್ಟದಲ್ಲಿ ದೊಡ್ಡ ಚರ್ಚೆಗೆ ಒಳಗಾಗಿದ್ದು, ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಗಿವೆ. ತನಿಖೆ ಕಾರ್ಯ ಪ್ರಗತಿಯಲ್ಲಿದ್ದು ಸೂಕ್ತ ಮತ್ತು ನಿಷ್ಪಕ್ಷಪಾತ ತನಿಖೆಗೆ ಎಬಿವಿಪಿ ಕಾರ್ಯಕರ್ತರು ಒತ್ತಾಯಿಸಿದರು. ಕೆಪಿಎಸ್‌ಸಿ ನೇಮಕಾತಿಗಳಲ್ಲಿ ಪದೇ ಪದೇ ಅಕ್ರಮಗಳು ನಡೆಯುತ್ತಿರುವುದು ವಿದ್ಯಾರ್ಥಿ ಸಮುದಾಯದಲ್ಲಿ ಆತಂಕ ಮೂಡಿಸಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪಶುಸಂಗೋಪನೆ ಇಲಾಖೆಯ ಸುಮಾರು 400 ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗಾಗಿ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಜು.17ರಂದು ಹೊರಬಿದ್ದ ಫಲಿತಾಂಶದಲ್ಲಿ ಅಕ್ರಮ ನಡೆದಿರುವುದು ಬಯಲಾಗಿದೆ. ಒಂದು ಹುದ್ದೆಗೆ ಬರೋಬ್ಬರಿ 80 ಲಕ್ಷ ರೂ.ವರೆಗೆ ಬೆಲೆ ಕಟ್ಟಿ ಮಾರಾಟ ಮಾಡಿರುವುದು, ಅಭ್ಯರ್ಥಿಗಳಿಗೆ ಕರೆ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿರುವುದು ಹಾಗೂ ಓಎಂಆರ್ ಶೀಟ್ ಟ್ಯಾಂಪರಿಂಗ್‌ನಂತಹ ಆರೋಪಗಳು ಕೇಳಿಬಂದಿವೆ.

ರಾಜ್ಯಾದ್ಯಂತ ಕೆಪಿಎಸ್‌ಸಿ ನೇಮಕಾತಿ ಅಕ್ರಮದ ವಿರುದ್ಧ ಹೋರಾಟಗಳು ಮತ್ತು ಪ್ರತಿಭಟನೆಗಳು ನಡೆಯುತ್ತಿವೆ. ಈ ಅಕ್ರಮಗಳಿಗೆ ಕಡಿವಾಣ ಹಾಕಬೇಕು ಮತ್ತು ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಎಬಿವಿಪಿ ಬೆಂಗಳೂರು ಮಹಾನಗರ ಸಂಘಟನಾ ಕಾರ್ಯದರ್ಶಿ ಮಣಿಕಂಠ ಕಳಸ ಆಗ್ರಹಿಸಿದರು.

ಪ್ರತಿಭಟನಾಕಾರರನ್ನು ವಶಕ್ಕೆ ಪಡೆದಿದ್ದರೂ, ಮುಂಜಾಗ್ರತಾ ಕ್ರಮವಾಗಿ ಕೆಪಿಎಸ್‌ಸಿ ಕಚೇರಿ ಮತ್ತು ವಿಧಾನಸೌಧದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚುವರಿ ಪೊಲೀಸ್ ಭದ್ರತೆಯನ್ನು ನಿಯೋಜಿಸಲಾಗಿತ್ತು. ಕೆಪಿಎಸ್‌ಸಿ ಕಚೇರಿಯಿಂದ ಸಿಐಡಿ ಕಚೇರಿಗೆ ಹೋಗುವ ದ್ವಾರದವರೆಗೂ ಸಂಪೂರ್ಣವಾಗಿ ಬ್ಯಾರಿಕೇಡ್‌ಗಳನ್ನು ಹಾಕಿ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿದ್ದು, ಕಚೇರಿಯ ಸಿಬ್ಬಂದಿಗೆ ಹಾಗೂ ಅನಿವಾರ್ಯ ಕೆಲಸದ ನಿಮಿತ್ತ ಬಂದವರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಇಂದಿನ ಕಾರ್ಯಕ್ರಮ 31-07-2026, ಶುಕ್ರವಾರ

ಬೆಳಗ್ಗೆ: ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ: ಮೊಗಳ್ಳಿ ಗಣೇಶ್ ಅವರ ಸಾಹಿತ್ಯ ರಾಜ್ಯಮಟ್ಟದ ವಿಚಾರ ಸಂಕಿರಣ. ಉದ್ಘಾಟನೆ: ಸಂಸ್ಕೃತಿ ಚಿಂತಕ ಡಾ ನಟರಾಜ್ ಹುಳಿಯಾರ್. ಸ್ಥಳ: ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಜಯನಗರ. 10.30

ಕರ್ನಾಟಕ ಗಾಂಧಿ ಸ್ಮಾರಕ ನಿಧಿ: 2025–26ನೇ ಸಾಲಿನ ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆಯ 10ನೇ ವರ್ಷದ ಘಟಿಕೋತ್ಸವ, ರಾಜ್ಯಮಟ್ಟದ ಯುವ ಪ್ರೇರಣಾ ಕಾರ್ಯಾಗಾರ. ಉದ್ಘಾಟನೆ: ಕಾಲೇಜು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಡಾ. ಎಚ್.ಎನ್.ಗೋಪಾಲಕೃಷ್ಣ. ಅಧ್ಯಕ್ಷತೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ ಕೃಷ್ಣ, ಮುಖ್ಯಅತಿಥಿ: ಜಿ.ಆರ್.ಎಫ್. ಜಲಗಾಂವ್ ಪರೀಕ್ಷಾ ನಿಯಂತ್ರಣಾಧಿಕಾರಿ ಗಿರೀಶ್ ಕುಲಕರ್ಣಿ. ಸ್ಥಳ: ಗಾಂಧಿಭವನ. 11.00

ವಿಲ್ಸನ್ ಗಾರ್ಡನ್ ವಿದ್ಯಾ ಸಂಸ್ಥೆಯ ಹಿರಿಯ ವಿದ್ಯಾಥಿಗಳ ಸಂಘಟನೆ. ನಲಿ ಕಲಿ ಕಾರ್ಯಕ್ರಮ. ಮುಖ್ಯಅತಿಥಿ: ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಹೊಂಬೆಳಕು ಉಪಾಧ್ಯಕ್ಷ ಡಾ. ಟಿ.ಎ.ಬಾಲಕೃಷ್ಣ. ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆಯ ಸಭಾಂಗಣ. ಹೊಂಬೇಗೌಡನಗರ. 11.00

ಮಧ್ಯಾಹ್ನ: ಕನ್ನಡ ಸಂಘ ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ: ಕಂಬಾರರ ನಾಟಕಗಳು ಪುಸ್ತಕ ಬಿಡುಗಡೆ ಕಾರ್ಯಕ್ರಮ. ಮುಖ್ಯಅತಿಥಿ: ಹಿರಿಯ ಕನ್ನಡ ವಿಮರ್ಶಕ ಡಾ. ಬಸವರಾಜ ಕಲ್ಗುಡಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ್ ಕಂಬಾರ, ಅಧ್ಯಕ್ಷತೆ: ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ ಕುಲಸಚಿವ ಡಾ. ಅನಿಲ್ ಜೋಸೆಫ್ ಪಿಂಟೋ. ಸ್ಥಳ: ಸಿಂಡಿಕೇಟ್ ರೂಂ, ಸಭಾಂಗಣ ಬ್ಲಾಕ್ ಕ್ರೈಸ್ಟ್ ಯೂನಿವರ್ಸಿಟಿ, ಹೊಸೂರು ರಸ್ತೆ. 3.30

ಸಂಜೆ: ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್: 26ನೇ ವರ್ಷದ ಪ್ರವಚನ ವಾಹಿನಿ. ಸ್ವಾಮಿ ನಾರಾಯಣನಂದ ಸರಸ್ವತೀಜಿ ಅವರಿಂದ ತತ್ವಭೋಧ ಕಾರ್ಯಕ್ರಮ. ಸ್ಥಳ: ಸಾಂಸ್ಕೃತಿಕ ಮಂದಿರ, 9ನೇ ಬಡಾವಣೆ, ಜಯನಗರ. 6.30

ರಂಗಪಯಣ ತಂಡಕ್ಕೆ 17ನೇ ವರ್ಷದ ಸಂಭ್ರಮದ ಪ್ರಯುಕ್ತ ನಾಟಕೋತ್ಸವ. ಪೂಲನ್ ದೇವಿ ಜೀವನಾಧಾರಿತ ನಾಟಕ ಪೂಲನ್ ದೇವಿ, ನಿರ್ದೇಶನ ರಾಜಗುರು ಹೊಸಕೋಟೆ, ನಿರ್ವಹಣೆ: ನಯನ ಜೆ. ಸೂಡ. ಸ್ಥಳ: ರವೀಂದ್ರ ಕಲಾಕ್ಷೇತ್ರ. 6.30

ಸ್ಟಾರ್ ಹೆಲ್ತ್ ಇನ್ಶೂರೆನ್ಸ್‌ಗೆ 550 ಕೋಟಿ ರೂ. ಲಾಭ

ಬೆಂಗಳೂರು: ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, 2026–27ನೇ ಹಣಕಾಸು ವರ್ಷದ ಪ್ರಥಮ ತ್ರೈಮಾಸಿಕದಲ್ಲಿ 550 ಕೋಟಿ ರೂ. ಲಾಭ ಗಳಿಸಿದೆ. ಜೂ.30ಕ್ಕೆ ಕೊನೆಗೊಂಡ ಅವಧಿಯಲ್ಲಿ ಕಂಪನಿಯು ತೆರಿಗೆ ನಂತರದ ಲಾಭ ಗಳಿಸಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ.25ರಷ್ಟು ಗಮನಾರ್ಹ ಬೆಳವಣಿಗೆ ಕಂಡಿದೆ. ಕಳೆದ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕೇವಲ 16 ಕೋಟಿ ರೂ. ಇದ್ದ ಕಂಪನಿಯ ಅಂಡರ್ ರೈಟಿಂಗ್ ಲಾಭ, ಈ ಬಾರಿ ಭಾರೀ ಜಿಗಿತ ಕಂಡು 111 ಕೋಟಿ ರೂ.ಗೆ ತಲುಪಿದೆ. ವಾರ್ಷಿಕ ಆಧಾರದಲ್ಲಿ ಶೇ.19ರಷ್ಟು ಪ್ರಗತಿ ಸಾಧಿಸಿದೆ.

ಮೈಸೂರು ರಸ್ತೆಯ ಪಟೇಲ್ ಗುಳ್ಳಪ್ಪ ಶಿಕ್ಷಣ ಸಂಸ್ಥೆಯಲ್ಲಿ ಶ್ರೀಹಳ್ಳಿಕಾರ್ ಮಠದ ಸಂಯುಕ್ತಾಶ್ರಯದಲ್ಲಿ ಜರುಗಿದ ಗುರು ಪೌರ್ಣಿಮೆ ಕಾರ್ಯಕ್ರಮದಲ್ಲಿ ಹಳ್ಳಿಕಾರ ಮಠದ ಪೀಠಾಧ್ಯಕ್ಷ ಬಾಲಕೃಷ್ಣ ಆನಂದ ಸ್ವಾಮೀಜಿ, ಮಠದ ಅಧ್ಯಕ್ಷ ನಾಗಯ್ಯ ಉಪಸ್ಥಿತರಿದ್ದರು.

ಸ್ಪರ್ಶ್ ಆಸ್ಪತ್ರೆಗೆ ಐಎಫ್ಇಎಂ ಗೋಲ್ಡ್ ಲೆವಲ್ ಪ್ರಮಾಣಪತ್ರ

ಬೆಂಗಳೂರು: ಹೆಣ್ಣೂರಿನ ಸ್ಪರ್ಶ್ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕಕ್ಕೆ ವಿಶ್ವದಲ್ಲೇ ಮೊದಲ ಬಾರಿಗೆ ಪ್ರತಿಷ್ಠಿತ ಐಎಫ್ಇಎಂ ಗೋಲ್ಡ್ ಲೆವಲ್ ಪ್ರಮಾಣ ಪತ್ರ ಲಭಿಸಿದೆ. ಈ ಮೂಲಕ, ತುರ್ತು ಚಿಕಿತ್ಸಾ ವಿಭಾಗದಲ್ಲೇ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ತುರ್ತು ಚಿಕಿತ್ಸೆಯ ಅಂತಾರಾಷ್ಟ್ರೀಯ ಒಕ್ಕೂಟ (ಇಂಟರ್‌ನ್ಯಾಷನಲ್ ಫೆಡರೇಷನ್ ಫಾರ್ ಎಮರ್ಜೆನ್ಸಿ ಮೆಡಿಸಿನ್/ ಐಎಫ್ಇಎಂ) ಈ ಪ್ರಮಾಣಪತ್ರವನ್ನು ನೀಡಿದ್ದು, ಜರ್ಮನಿಯಲ್ಲಿ ಇತ್ತೀಚೆಗೆ ನಡೆದ ತುರ್ತು ಚಿಕಿತ್ಸಾ ವಿಭಾಗದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಮಾಣಪತ್ರವನ್ನು ಪ್ರದಾನ ಮಾಡಲಾಯಿತು.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸ್ಪರ್ಶ್ ಗ್ರೂಪ್ ಆಫ್ ಹಾಸ್ಪಿಟಲ್ಸ್ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ.ಶರಣ ಶಿವರಾಜ್ ಪಾಟೀಲ್ ಅವರು, ತುರ್ತು ಚಿಕಿತ್ಸಾ ವಿಭಾಗದಲ್ಲಿ ಜಾಗತಿಕ ಮಟ್ಟದ ಅತ್ಯುನ್ನತ ಗುಣಮಟ್ಟಗಳ ಮಾನದಂಡಗಳನ್ನು ಪೂರೈಸುವಲ್ಲಿ ಸ್ಪರ್ಶ್ ಆಸ್ಪತ್ರೆ ಹೆಣ್ಣೂರು ಘಟಕವು ಯಶಸ್ವಿಯಾಗಿದ್ದು ಈ ಸಾಧನೆಗಾಗಿ ಅಂತಾರಾಷ್ಟ್ರೀಯ ಪ್ರಮಾಣಪತ್ರ ನೀಡಲಾಗಿದೆ ಎಂದು ತಿಳಿಸಿದರು.

ಐಎಫ್ಇಎಂ ಜಾಗತಿಕವಾಗಿ ಗುರುತಿಸಿದ ಮಾನದಂಡಗಳ ಅಡಿಯಲ್ಲಿ 2025ರ ಡಿಸೆಂಬರ್ 3ರಿಂದ ಡಿಸೆಂಬರ್ 5 ರವರೆಗೆ ಮಧ್ಯಪ್ರಾಚ್ಯದ ಪ್ರಮುಖ ವರ್ಗೀಕರಣ ಸೊಸೈಟಿ ಟಿಎಎಸ್‌ಎನ್‌ಇಇಎಫ್ ಸಹಭಾಗಿತ್ವದಲ್ಲಿ ಮೂರು ದಿನಗಳ ಕಾಲ ನಡೆಸಿದ ಸಮಗ್ರ ಪರಿಶೋಧನೆಯ ಆಧಾರದಲ್ಲಿ ಪ್ರಮಾಣೀಕರಣವನ್ನು ನೀಡಲಾಗಿದೆ ಎಂದರು.

ಸ್ಪರ್ಶ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಹಿರಿಯ ಸಲಹೆಗಾರ ಮತ್ತು ಸಮೂಹ ಮುಖ್ಯಸ್ಥ ಡಾ.ಟಿ.ಎಸ್.ಶ್ರೀನಾಥ್ ಕುಮಾರ್ ಅವರು ಮಾತನಾಡಿ, ಶೇ. 99.6ರಷ್ಟು ಅಸಾಧಾರಣ ಅಂಕಗಳೊಂದಿಗೆ ಐಎಫ್ಇಎಂನ ಗೋಲ್ಡ್ ಲೆವೆಲ್ ಪ್ರಮಾಣೀಕರಣದ ಸಾಧನೆಯು ಸ್ಪರ್ಶ್ ಆಸ್ಪತ್ರೆಗಳ ಜಾಗತಿಕ ಮಾನದಂಡಗಳ ಅನುಸರಣೆ, ರೋಗಿಗಳ ಸುರಕ್ಷತೆಯಲ್ಲಿ ಎಂದಿಗೂ ರಾಜಿಯಾಗದ ನೀತಿ ಮತ್ತು ನಿರಂತರ ಸುಧಾರಣೆಗೆ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಇಡೀ ಸರ್ಕಾರ ದಿಲ್ಲೀಲಿ ಇಲ್ಲ: ಹರಿ

ನವದೆಹಲಿ: ಇಡೀ ಸರ್ಕಾರ ದೆಹಲಿಯಲ್ಲಿಲ್ಲ. ನಮ್ಮ ಸರ್ಕಾರದ ಮಂತ್ರಿಗಳೆಲ್ಲರೂ ಬೆಂಗಳೂರಿನಲ್ಲಿಯೇ ಇದ್ದು ಬರದ ಸ್ಥಿತಿ ಸೇರಿದಂತೆ ಇತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನಹರಿಸಿದ್ದಾರೆ. ಸಿಎಂ ಡಿ.ಕೆ.ಶಿವಕುಮಾರ್ ರಾಜ್ಯದ ಹಿತಾಸಕ್ತಿ ಉದ್ದೇಶದಿಂದಲೇ ದೆಹಲಿಗೆ ಬಂದಿದ್ದಾರೆಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸಮರ್ಥಿಸಿಕೊಂಡಿದ್ದಾರೆ. ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ದಿನ ಸಂಸದರೊಂದಿಗೆ ಸಭೆ ನಡೆಸಿ ಸಂಸತ್‌ನಲ್ಲಿ ರಾಜ್ಯದ ವಿಚಾರಗಳ ಬಗ್ಗೆ ಧ್ವನಿ ಎತ್ತಲು ಮನವರಿಕೆ ಮಾಡಿಕೊಡಲಾಗಿದೆ. ಬಳಿಕ ಸಿಎಂ ಕೇಂದ್ರದ ವಿವಿಧ ಸಚಿವರನ್ನು ಭೇಟಿಯಾಗಿದ್ದಾರೆ. ಈ ನಡುವೆ ಸರ್ಕಾರದ ಸಚಿವ ಸಂಪುಟ ವಿಸ್ತರಣೆ ಸಂಬಂಧವೂ ಹೈಕಮಾಂಡ್ ನಾಯಕರೊಂದಿಗೆ ಚರ್ಚೆ ಆಗಬೇಕಿದೆ. ಆದರೆ ಸಂಸತ್ ಅಧಿವೇಶನದ ಹಿನ್ನೆಲೆಯಲ್ಲಿ ಸಾಧ್ಯವಾಗಿಲ್ಲ. ಬಹುತೇಕ ಗುರುವಾರ ಸಂಜೆ ಫೈನಲ್ ಆಗಿ ಸಚಿವರ ಪಟ್ಟಿ ಹೊರಬರುವ ಸಾಧ್ಯತೆ ಇದೆ ಎಂದರು.